ನಂ.ಎಎಲ್ಎನ್(ಎಂಜೆ)ಸಿಆರ್.27/12-13

ಜಿಲ್ಲಾಧಿಕಾರಿಯವರ ಕಛೇರಿ,
ತುಮಕೂರು ಜಿಲ್ಲೆ,
ತುಮಕೂರು, ದಿನಾಂಕ.24-06-2013.

## ಅಧಿಕೃತ ಜ್ಞಾಪನ

ವಿಷಯ:- ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಹುಲಿಕುಂಟೆ ಹೋಬಳಿಯ ಬರಗೂರು ಗ್ರಾಮದ ಸ.ನಂ.130/2ರಲ್ಲಿ 0-18 ಗುಂಟೆ ಮತ್ತು ಸ.ನಂ.131/2ರಲ್ಲಿ 1-20 ಎಕರೆ/ಗುಂಟೆ ಒಟ್ಟು 1-38 ಎಕರೆ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ಶೈಕ್ಷಣಿಕ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಅರ್ಜಿ ಸಲ್ಲಿಸಿರುವ ಬಗ್ಗೆ.

ಉಲ್ಲೇಖ:1) ಶ್ರೀ ಕೆ.ಬಸವರಾಜು ಬಿನ್ ಲೇ.ಕೆಂಚಣ್ಣ, ಗೋಣಿಹಳ್ಳಿ, ಹುಲಿಕುಂಟೆ ಹೋಬಳಿ, ಶಿರಾ ತಾಲ್ಲೂಕು ರವರ ಅರ್ಜಿ ದಿನಾಂಕ:03-12-2012.

2) ತಹಶೀಲ್ದಾರ್, ಶಿರಾ ತಾಲ್ಲೂಕು ರವರ ಪತ್ರ ಸಂಖ್ಯೆ.ಎಎಲ್ಎನ್.ಸಿಆರ್.41/12-13 ದಿನಾಂಕ:06-02-2013.

3) ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ತುಮಕೂರು ರವರ ಪತ್ರ ಸಂಖ್ಯೆ:ನಗ್ರಾಯೋಸನಿ/ತುಮ/ಭೂಪ/340/12-13/1177, ದಿನಾಂಕ:06-03-2013.

4) ಭೂಪರಿವರ್ತನ ಶುಲ್ಕ ರೂ.42,471-00, 6674 ಚ.ಅಡಿಗಳ ಅನಧಿಕೃತ ಕಟ್ಟಡಕ್ಕೆ ದಂಡ ರೂ.8,009-00 ಮತ್ತು ಪೋಡಿ ಶುಲ್ಕ ರೂ.110-00 ಒಟ್ಟು ರೂ.50,590-00 ಗಳನ್ನು ಚಲನ್ ನಂ.127 ದಿನಾಂಕ.20-06-2013ರಂದು ಖಜಾನೆಗೆ ಜಮಾ.

5) ಸರ್ಕಾರದ ಸುತ್ತೋಲೆ ನಂ.RD 7 LGP 95 ದಿ.7-6-99.

6) ಸರ್ಕಾರದ ಸುತ್ತೋಲೆ ನಂ.RD 56 LGP 2008 ದಿ.10-9-08.

ಕರ್ನಾಟಕ ಭೂಕಂದಾಯ ಅಧಿನಿಯಮ 1964 ಕಲಂ 95(2), 95(4) ಮತ್ತು 95(7)ರ ಷರತ್ತುಗಳನ್ನು ಹಾಗೂ ಈ ಕೆಳಕಾಣಿಸಿದ ಷರತ್ತುಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ಶೈಕ್ಷಣಿಕ ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ.21,780-00 ಗಳಂತೆ 1 ಎಕರೆ 38 ಗುಂಟೆ ವಿಸ್ತೀರ್ಣಕ್ಕೆ ರೂ.42,471-00, 6674 ಚ.ಅಡಿಗಳ ಅನಧಿಕೃತ ಕಟ್ಟಡಕ್ಕೆ ದಂಡ ರೂ.8,009-00 ಮತ್ತು ಪೋಡಿ ಶುಲ್ಕ ರೂ.110-00 ಒಟ್ಟು ರೂ.50,590-00 (ರೂಪಾಯಿಗಳು ಐವತ್ತು ಸಾವಿರದ ಐದು ನೂರ ತೊಂಬತ್ತು ಮಾತ್ರ) ಗಳನ್ನು ಅರ್ಜಿದಾರರು ಉಲ್ಲೇಖ (4)ರ ಚಲನ್‌ನಲ್ಲಿ ನಮೂದಿಸಿರುವಂತೆ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿದ ಮೇರೆಗೆ ಅರ್ಜಿದಾರರ ಅರ್ಜಿಯನ್ನು ಪರಿಗಣಿಸಿ ಶಿರಾ ತಾಲ್ಲೂಕಿನ ಹುಲಿಕುಂಟೆ ಹೋಬಳಿಯ ಬರಗೂರು ಗ್ರಾಮದ ಸ.ನಂ.130/2ರಲ್ಲಿ 0-18 ಗುಂಟೆ ಮತ್ತು ಸ.ನಂ.131/2ರಲ್ಲಿ 1-20 ಎಕರೆ/ಗುಂಟೆ ಒಟ್ಟು 1-38 ಎಕರೆ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ಶೈಕ್ಷಣಿಕ ಉದ್ದೇಶಕ್ಕಾಗಿ ಬಳಸಲು ಈ ಕೆಳಕಾಣಿಸಿದ ಷರತ್ತುಗಳಿಗೆ ಒಳಪಡಿಸಿ ಉಲ್ಲೇಖ(5)ರ ಸುತ್ತೋಲೆಯ ನಿರ್ದೇಶನದಂತೆ ಈ ಕೆಳಕಾಣಿಸಿದ ಷರತ್ತುಗಳನ್ನು ವಿಧಿಸಿ ಭೂಪರಿವರ್ತನ ಆದೇಶವನ್ನು ಹೊರಡಿಸಿದೆ.

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಗ್ರಾಮಪಂಚಾಯಿತಿಯಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

..2

PRINCIPAL
THE FLORENCE PUBLIC SCHOOL
Baraguru, Sira Tq, Tumkur Dist.

For THE FLORENCE PUBLIC SCHOOL
Chairman

2. ಈ ಭೂಪರಿವರ್ತಿತ ಜಮೀನನ್ನು **ಶೈಕ್ಷಣಿಕ** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ತುಮಕೂರು ರವರಿಂದ ಅನುಮೋದಿಸಿಕೊಂಡು, ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4. ಇತರೆ ಅವಶ್ಯವಾದ **ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ** ಇತ್ಯಾದಿಗಳನ್ನು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ **ಯೋಜನಾ** ಇಲಾಖೆ, ತುಮಕೂರು ರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳಂತೆ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

5. ಸರ್ಕಾರದ ಆದೇಶ ಸಂಖ್ಯೆ.ಪಿಡಬ್ಲ್ಯುಡಿ.7556–665 ಆರ್ ಮತ್ತು ಬಿ–6–54–5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ.ಪಿ1:7(11)67 ದಿನಾಂಕ.01–01–1966 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

6. ಅರ್ಜಿದಾರರು ನಗರ ಭೂ ಪರಿಮಿತಿ ಕಾಯ್ದೆ 1976 ವಿಧಿ 6(1)ರ ಪ್ರಕಾರ ಸಕ್ಷಮ ಪ್ರಾಧಿಕಾರದಲ್ಲಿ ಘೋಷಣೆ ಪತ್ರವನ್ನು ಸಲ್ಲಿಸದಿದ್ದಲ್ಲಿ ಈಗ ತಕ್ಷಣ ಅಂತಹ ಘೋಷಣೆ ಪತ್ರವನ್ನು ಸಲ್ಲಿಸತಕ್ಕದ್ದು ಮತ್ತು ಈ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಭೂ ಪರಿಮಿತಿ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ.

7. ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ ರಿಟ್ ಅರ್ಜಿ/ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

8. ನಕ್ಷೆಯಲ್ಲಿ ಗುರ್ತಿಸಿರುವಂತೆ 0–02 ಗುಂಟೆ ಜಮೀನನ್ನು ರಸ್ತೆ ಮಾರ್ಜಿನ್‌ಗಾಗಿ ಕಾಯ್ದಿರಿಸಿದೆ.

9. ಮೇಲ್ಕಾಣಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು

PRINCIPAL
THE FLORENCE PUBLIC SCHOOL
Baraguru, Sira Tq, Tumkur Dist.

For THE FLORENCE PUBLIC SCHOOL
Chairman

## ಷೆಡ್ಯೂಲ್ ವಿವರ

ಶಿರಾ ತಾಲ್ಲೂಕಿನ ಹುಲಿಕುಂಟೆ ಹೋಬಳಿಯ ಬರಗೂರು ಗ್ರಾಮದ ಸ.ನಂ.130/2ರಲ್ಲಿ 0–18 ಗುಂಟೆ ಮತ್ತು ಸ.ನಂ.131/2ರಲ್ಲಿ 1–20 ಎಕರೆ/ ಗುಂಟೆ ಒಟ್ಟು 1–38 ಎಕರೆ/ಗುಂಟೆ ವಿಸ್ತೀರ್ಣದ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ:

| | | ಸ.ನಂ.130/2 | ಸ.ನಂ.131/2 |
|---|---|---|---|
| ಪೂರ್ವಕ್ಕೆ | ... | ರಸ್ತೆ | ರಸ್ತೆ |
| ಪಶ್ಚಿಮಕ್ಕೆ | ... | ಉಳಿಕೆ ಲಾಹಿ 1 | ಲಾಹಿ 1 |
| ಉತ್ತರಕ್ಕೆ | ... | ಲಾಹಿ 1 | ಅರ್ಜಿದಾರ ಜಮೀನು |
| ದಕ್ಷಿಣಕ್ಕೆ | ... | ಬಸವರಾಜು | ಲಾನಂ.132 |

–ಸಹಿ–
ಜಿಲ್ಲಾಧಿಕಾರಿ (ಪ್ರಭಾರ),
ತುಮಕೂರು ಜಿಲ್ಲೆ.

ಪ್ರತಿಯನ್ನು:

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಕಂದಾಯ ಇಲಾಖೆ, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಉಪವಿಭಾಗಾಧಿಕಾರಿ, ಮಧುಗಿರಿ ಉಪವಿಭಾಗ, ಮಧುಗಿರಿ.
3) ತಹಶೀಲ್ದಾರ್, ಶಿರಾ ತಾಲ್ಲೂಕು ರವರಿಗೆ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರು ಭೂಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್‌ಟಿಸಿಯಲ್ಲಿ ನಮೂದಿಸತಕ್ಕದ್ದು ಮತ್ತು ಈ ಜಮೀನಿನ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
4) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬರಗೂರು ಗ್ರಾಮ ಪಂಚಾಯಿತಿ, ಶಿರಾ ತಾಲ್ಲೂಕು ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
5) ಅರ್ಜಿದಾರರಾದ ಶ್ರೀ ಕೆ.ಬಸವರಾಜು ಬಿನ್ ಲೇ.ಕೆಂಚಣ್ಣ, ಗೋಣಿಹಳ್ಳಿ, ಹುಲಿಕುಂಟೆ ಹೋಬಳಿ, ಶಿರಾ ತಾಲ್ಲೂಕು ರವರಿಗೆ ನೋಂದಾಯಿತ ಅಂಚೆ ಮೂಲಕ.
6) ಕಛೇರಿ ಪ್ರತಿಗಳು.

ಅಪರ ಜಿಲ್ಲಾಧಿಕಾರಿ
ತುಮಕೂರು ಜಿಲ್ಲೆ.

PRINCIPAL
THE FLORENCE PUBLIC SCHOOL
Baraguru, Sira Tq, Tumkur Dist.

For THE FLORENCE PUBLIC SCHOOL
Chairman